ಜನಗಾಯಕರಾದ ಪಿಚ್ಚಳ್ಳಿ ಶ್ರೀನಿವಾಸ್, ಜನ್ನಿ ಹಾಗೂ ಇತರ ಗಾಯಕರು ಸಿದ್ಧಲಿಂಗಯ್ಯನವರ ಹಾಡುಗಳನ್ನು ಹಾಗೂ ಸಮಾನತಾ ಸಂದೇಶದ ಹಾಡುಗಳನ್ನು ದಣಿವರಿಯದೆ ಹಾಡಿ ದಲಿತ ಚಳವಳಿಯ ದನಿಯಾದರು. ರೈತ ಚಳವಳಿಯ ಖಡಕ್ ಘೋಷಣೆಗಳು, ಹಾಡುಗಳು, ಎನ್. ಡಿ. ಸುಂದರೇಶ್, ನಂಜುಂಡಸ್ವಾಮಿಯವರ ತೀಕ್ಷ್ಣ ವಿಶ್ಲೇಷಣೆಗಳು ದಿಟ್ಟ ರೈತ ಚಳವಳಿಗಾರರನ್ನು, ಚಳವಳಿಯ ಬೆಂಬಲಿಗರನ್ನು ರೂಪಿಸಿದವು. ಈ ಎಲ್ಲ ಚಳವಳಿಗಳ ಸ್ಫೂರ್ತಿಮೂಲಗಳನ್ನು ನಿರಂತರವಾಗಿ ಹಬ್ಬಿಸಿದ ರಾಜಕೀಯ, ಸಾಮಾಜಿಕ ಕಾರ್ಯಕರ್ತರು ಹಾಗೂ ಪತ್ರಕರ್ತರ ಕೊಡುಗೆ ಚಾರಿತ್ರಿಕವಾದುದು.

ದಲಿತ ಚಳವಳಿಯನ್ನು ರೂಪಿಸಿದ ಹಲವಾರು ನಾಯಕರು, ನೋವುಂಡ ಕಾರ್ಯಕರ್ತರುಗಳ ಜೊತೆಜೊತೆಗೇ ದಲಿತ ಚಳವಳಿಯನ್ನು ಕಟ್ಟಿದ ಮೂವರು ಬುದ್ಧಿಜೀವಿಗಳು ಬಿ. ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದವರಾಗಿದ್ದರು ಎಂಬುದು ಕನ್ನಡ ಸಾಹಿತ್ಯ ಮತ್ತು ಚಳವಳಿಗಳ ಸಂಬಂಧ ಕುರಿತಂತೆ ಚಾರಿತ್ರಿಕ ಮಹತ್ವದ ಸಂಗತಿಯೊಂದನ್ನು ಸೂಚಿಸುತ್ತದೆ. ಈ ಸಂಗತಿ ಇವತ್ತಿಗೂ ಕನ್ನಡ ಸಾಹಿತ್ಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬೋಧಕ, ಬೋಧಕಿಯರ ಚಿಂತನೆ, ಕ್ರಿಯೆಗಳಿಗೆ ಹೊಸ ಪ್ರೇರಣೆ ಹಾಗೂ ದಿಕ್ಕುಗಳನ್ನು ನೀಡಬಲ್ಲ ಸ್ಫೂರ್ತಿದಾಯಕ ಅಂಶವಾಗಿದೆ. ಅವತ್ತು ದಲಿತ ಚಳವಳಿಯ ಜೊತೆಗಿದ್ದ ಲೇಖಕ ಲೇಖಕಿಯರು ಮುಂದೆ ಬಂಡಾಯದ ಕವಲಾಗಿ ಬೆಳೆದರು. ಬರಗೂರು ರಾಮಚಂದ್ರಪ್ಪ, ಡಿ.ಆರ್. ನಾಗರಾಜ್, ಚೆನ್ನಣ್ಣ ವಾಲೀಕಾರರಂಥ ಕನ್ನಡ ಸಾಹಿತ್ಯದ ಪ್ರಾಧ್ಯಾಪಕರು, ಜಿ.ರಾಮಕೃಷ್ಣ, ಚಂದ್ರಶೇಖರ ಪಾಟೀಲ, ಕೆ.ಎಸ್. ಭಗವಾನ್ ಥರದ ಇಂಗ್ಲಿಷ್ ಪ್ರಾಧ್ಯಾಪಕರು,



ದಲಿತರ ಆತ್ಮಗೌರವದ ರಾಜಕಾರಣದ ಪ್ರತೀಕ ಬಿ. ಬಸವಲಿಂಗಯ್ಯ

ಕುಂವೀ, ಸತ್ಯಾನಂದ ಪಾತ್ರೋಟ, ಲಲಿತಾ ನಾಯಕ್, ಆರ್.ಜಿ. ಹಳ್ಳಿ ನಾಗರಾಜ್, ಆರ್.ವಿ. ಭಂಡಾರಿ ಹೀಗೆ ನಾಡಿನ ಹಲವಾರು ವಲಯಗಳ ನೂರಾರು ಲೇಖಕ ಲೇಖಕಿಯರು, ರಂಜಾನ್ ದರ್ಗಾ, ಗಂಗಾಧರ ಮೊದಲಿಯಾರರಂಥ ಕನ್ನಡ ಪತ್ರಕರ್ತರು ಬಂಡಾಯ ಸಾಹಿತ್ಯದ ಈ ಘಟ್ಟದಲ್ಲಿ ಮುಂಚೂಣಿಯಲ್ಲಿದ್ದರು.

ದಲಿತ ಹಾಗೂ ಬಂಡಾಯ ಚಳವಳಿಯ ಜೊತೆಗೇ ಸ್ತ್ರೀವಾದಿ ಚಿಂತನೆ ಹಾಗೂ ಮಹಿಳಾ ಹೋರಾಟ ಕರ್ನಾಟಕದಲ್ಲಿ ರೂಪುಗೊಳ್ಳತೊಡಗಿತು. ವಿಜಯಾ ದಬ್ಬೆಯವರಂತ ಚಿಂತಕಿಯರ ಜೊತೆಜೊತೆಗೇ ಆಕ್ಟಿವಿಸ್ಟರಾದ ಮೀರಾ ನಾಯಕ್, ಎನ್. ಗಾಯತ್ರಿ, ರಾಜೇಶ್ವರಿ, ನೀಲಾ, ಮೀನಾಕ್ಷಿ ಬಾಳಿ ಮೊದಲಾದವರ ಮೂಲಕ ಕನ್ನಡ ಸ್ತ್ರೀವಾದದ ವಿಶಿಷ್ಟ ಆಯಾಮವೊಂದು ರೂಪುಗೊಂಡಿತು. ಫಕೀರ್ ಮಹಮದ್ ಕಟ್ಪಾಡಿ, ಬೊಳುವಾರು, ಬಾನು ಮುಷ್ತಾಕ್,



ಕಮ್ಯುನಿಸ್ಟ್ ತತ್ವಗಳ ಕೃತಿರೂಪವಾದ 'ಚಿರಸ್ಮರಣೆ' ಕಾದಂಬರಿಯ ಮೂಲಕ ಚಿರಸ್ಮರಣೀಯರಾಗಿರುವ ನಿರಂಜನ

ಸಾರಾ ಅಬೂಬಕರ್, ಶರೀಫಾ ಅವರ ಕೃತಿಗಳು ಮುಸ್ಲಿಂ ಸಮುದಾಯದ ವಿಮೋಚನೆ ಹಾಗೂ ಪ್ರತಿಭಟನೆಗಳ ದನಿಯನ್ನು ಮಂಡಿಸತೊಡಗಿದವು. ಈ ಕಾಲದಲ್ಲೇ ದಲಿತ ಚಳವಳಿ ಹಾಗೂ ರೈತ ಚಳವಳಿಗಳೆರಡೂ ವಿದ್ಯಾರ್ಥಿಗಳ ಹಾಗೂ ಗ್ರಾಮೀಣ ಕರ್ನಾಟಕದ ಜನರ ರಾಜಕೀಯ ಪ್ರಜ್ಞೆಯನ್ನು ಮೊನಚಾಗಿಸಿದವು.

ಪ್ರಗತಿಶೀಲ ಘಟ್ಟದ ಕನ್ನಡ ಚಳವಳಿಯ ನಂತರ ಎಂಬತ್ತರ ದಶಕದ ಗೋಕಾಕ್ ಚಳವಳಿ ಕನ್ನಡ ಸಾಹಿತಿಗಳು, ಕಲಾವಿದರು, ಪತ್ರಕರ್ತರು ಕನ್ನಡ ಭಾಷೆಯ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಲು ಬೀದಿಗಿಳಿದ ಚಳವಳಿಯಾಗಿ ಕನ್ನಡದ ಹೊಸ ಪ್ರಜ್ಞೆಯನ್ನು ಮೂಡಿಸಿತು. ಈ ಘಟ್ಟದಲ್ಲಿ ಈ ಎಲ್ಲ ಚಳವಳಿಗಳ ಚೈತನ್ಯದ ಫಲವಾಗಿಯೂ ಹುಟ್ಟಿದ ಲಂಕೇಶರ 'ಲಂಕೇಶ್ ಪತ್ರಿಕೆ' ಈ ಚಳವಳಿಗಳ ಮಿತ್ರನೂ ವಿಮರ್ಶಕನೂ ಆಯಿತು; ಈ ಎಲ್ಲ ಚಳವಳಿಗಳ ತಾತ್ವಿಕ ಆಶಯಗಳನ್ನು ಬಹುಕಾಲ ಜೀವಂತವಾಗಿರಿಸಿತು. ಕೋಮುವಾದದ ವಿರುದ್ಧ ಪ್ರಬಲ ಧ್ವನಿಯನ್ನು ರೂಪಿಸಿ ಜಾತ್ಯತೀತ ಚಳವಳಿಯ ಮುಂಚೂಣಿ ವಕ್ತಾರನಾಯಿತು. ಈ ಕೆಲಸವನ್ನು ಗೌರಿ ಲಂಕೇಶ್ ಕೂಡ ಮುಂದುವರಿಸಿದ್ದರು. 1983ರಲ್ಲಿ 'ಲಂಕೇಶ್ ಪತ್ರಿಕೆ'ಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ತೇಜಸ್ವಿಯವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ರೈತ ಚಳವಳಿ, ದಲಿತ ಚಳವಳಿ, ವಿಚಾರವಾದಿ ಚಳವಳಿ, ಜಾತ್ಯತೀತ ಚಳವಳಿ ಈ ಎಲ್ಲದರ ಎಳೆಗಳಿದ್ದವು; ಕೋಮುದಳ್ಳುರಿಯ ಹೊಗೆಯ ನಡುವೆ ಹೊಸಹೊಸ ತಲೆಮಾರುಗಳು ಮುಕ್ತವಾಗಿ, ಜಾತ್ಯತೀತವಾಗಿ ಚಿಂತಿಸುವ, ನಡೆದುಕೊಳ್ಳುವ ಸಹಜ ರೀತಿಗಳನ್ನು 'ಚಿದಂಬರ ರಹಸ್ಯ' ಕಾಣಿಸುತ್ತಿತ್ತು. ಇಪ್ಪತ್ತನೆಯ ಶತಮಾನದ ಕೊನೆಗೆ ಬಂದ ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಅಷ್ಟು ಹೊತ್ತಿಗಾಗಲೇ ಕನ್ನಡ ಚಿಂತನೆಯಲ್ಲಿ ಗಟ್ಟಿಯಾಗಿ ನೆಲೆಯೂರಿದ್ದ ಸ್ತ್ರೀವಾದಿ ನೆಲೆಯಿಂದ ಗಾಂಧೀಯುಗ ಆರಂಭಿಸಿದ ಬದಲಾವಣೆಯ ಸತ್ವವನ್ನು ಮರು ಪರಿಶೀಲನೆಗೆ ಒಡ್ಡಿತು




ಸಾಹಿತ್ಯ ರಚನೆಯ ಜೊತೆಗೆ ವರ್ತಮಾನಕ್ಕೆ ಸ್ಪಂದಿಸುವುದೂ ಲೇಖಕನ ಜವಾಬ್ದಾರಿ ಎಂದು ನಂಬಿಕೊಂಡಿದ್ದ ಯು.ಆರ್. ಅನಂತಮೂರ್ತಿ, ದೇವನೂರ ಮಹಾದೇವ ಮತ್ತು ಜಿ.ಕೆ. ಗೋವಿಂದರಾವ್, ಗಣಿ ಹಗರಣದ ವಿರುದ್ಧದ ಪ್ರತಿಭಟನೆಯಲ್ಲಿ...